ತೀವ್ರ ನಿಗಾ ಘಟಕಗಳು

3300 (3640); ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ)

ಅ) ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ಸಹಿತ ತೀವ್ರ ನಿಗಾಘಟಕಗಳನ್ನು ನಿರ್ಮಿಸಲು ಸಿದ್ಧಪಡಿಸಿರುವ ಯೋಜನೆಗಳೇನು;

ಆ) ಈ ಯೋಜನೆಗಾಗಿ ಮೀಸಲಿಟ್ಟ ಹಣವೆಷ್ಟು; ಬಿಡುಗಡೆಯಾದ ಹಣವೆಷ್ಟು;

ಇ) ಈಗಾಗಲೇ ನಿರ್ಮಿಸಿರುವ ಆಸ್ಪತ್ರೆಗಳೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)?

ಶ್ರೀ ಯು.ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ಒಳಪಟ್ಟ 10 ಜಿಲ್ಲೆಯಲ್ಲಿನ ಒಟ್ಟು 14 ಆಸ್ಪತ್ರೆಗಳಲ್ಲಿ ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಒಳಪಟ್ಟ 20 ಜಿಲ್ಲಾ ಆಸ್ಪತ್ರೆ ಮತ್ತು ಉನ್ನತಮಟ್ಟದ ಆಸ್ಪತ್ರೆಗಳಲ್ಲಿ ಈಗಾಗಲೇ ತೀವ್ರನಿಗಾ ಘಟಕಗಳು ಕಾರ್ಯನಿರ್ವಹಿಸುತ್ತಿವೆ. ಈ ಸಾಲಿನ ಆಯವ್ಯಯದಲ್ಲಿ ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ಮತ್ತು ಕೆಲವು ತಾಲ್ಲೂಕು ಆಸ್ಪತ್ರೆಗಳಲ್ಲಿ ವೆಂಟಿಲೇಟರ್ ಸಹಿತ ತೀವ್ರನಿಗಾ ಘಟಕ (ಐ.ಸಿ.ಯು) ಸ್ಥಾಪಿಸಲು ಘೋಷಿಸಿದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಬಾಕಿ ಇರುವ 2 ಜಿಲ್ಲಾ ಆಸ್ಪತ್ರೆಯಲ್ಲಿ ಮತ್ತು ಕೆಲವು ತಾಲ್ಲೂಕು ಆಸ್ಪತ್ರೆಗಳಲ್ಲಿ ತೀವ್ರನಿಗಾ ಘಟಕ ಸ್ಥಾಪಿಸಲು ಉದ್ದೇಶಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ 18 ಜಿಲ್ಲೆಯ 20 ಐ.ಸಿ.ಯು ಘಟಕಗಳಲ್ಲಿ ಕೊರತೆಯಿರುವ ಸಾಧನ ಸಲಕರಣೆಗಳನ್ನು ಹೆಚ್ಚುವರಿಯಾಗಿ ಸರಬರಾಜು ಮಾಡಲು ಸಹ ಉದ್ದೇಶಿಸಿದೆ.

ಆ) ಪ್ರಸಕ್ತ ಆರ್ಥಿಕ ವರ್ಷದಲ್ಲಿ ಇದೊಂದು ಹೊಸ ಯೋಜನೆಯಾಗಿರುವುದರಿಂದ, ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ಬಗ್ಗೆ ಆದೇಶ ಸಂಖ್ಯೆ: ಪಿಡಿ 05 ಐಎಂಎಂ 2010, ದಿನಾಂಕ: 03.4.2010 ರನ್ವಯ ಯೋಜನಾ ಇಲಾಖೆಯ ಸಹಮತ ನಿರೀಕ್ಷಿಸಲಾಗುತ್ತಿದೆ.

ಇ) ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಐ.ಸಿ.ಯು ಘಟಕಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ – 3640

ಐ.ಸಿ.ಯು. ಘಟಕಗಳ ಬಗ್ಗೆ ಮಾಹಿತಿ.

ಆಯಕ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಐ.ಸಿ.ಯು. ಘಟಕಗಳ ಆಸ್ಪತ್ರೆಗಳು

ಕ್ರ.ಸಂ	ಜಿಲ್ಲೆ ಹೆಸರು	ಆಸ್ಪತ್ರೆ ಹೆಸರು
1.	ಬೆಂಗಳೂರು (ನಗರ) ಜಿಲ್ಲೆ	ಕ.ಸಿ. ಜನರಲ್ ಆಸ್ಪತ್ರೆ
2.	ಬೆಂಗಳೂರು (ನಗರ) ಜಿಲ್ಲೆ	ಜಯನಗರ ಜನರಲ್ ಆಸ್ಪತ್ರೆ
3	ಬೆಂಗಳೂರು (ನಗರ) ಜಿಲ್ಲೆ	ಸಂಜಯ್ ಗಾಂಧಿ ಆಸ್ಪತ್ರೆ
4	ತುಮಕೂರು	ಜಿಲ್ಲಾ ಆಸ್ಪತ್ರೆ
5	ಚಿಕ್ಕಬಳ್ಳಾಪುರ	ಜಿಲ್ಲಾ ಆಸ್ಪತ್ರೆ
6	ಚಿತ್ರದುರ್ಗ	ಜಿಲ್ಲಾ ಆಸ್ಪತ್ರೆ
7	ರಾಮನಗರ	ಜಿಲ್ಲಾ ಆಸ್ಪತ್ರೆ
8	ಹಾಸನ	ಜಿಲ್ಲಾ ಆಸ್ಪತ್ರೆ
9	ವಿಜಾಪುರ	ಜಿಲ್ಲಾ ಆಸ್ಪತ್ರೆ
10	ಚಿಕ್ಕಮಗಳೂರು	ಜಿಲ್ಲಾ ಆಸ್ಪತ್ರೆ
11	ಚಾಮರಾಜನಗರ	ಜಿಲ್ಲಾ ಆಸ್ಪತ್ರೆ
12	ಉಡುಪಿ	ಜಿಲಾ ಆಸ್ಪತ್ರೆ
13	ದಕ್ಷಿಣ ಕನ್ನಡ	ಜಿಲಾ ಆಸ್ಪತ್ರೆ
14	ಕೊಡಗು	ಜಿಲಾ ಆಸ್ಪತ್ರೆ
15	ಗುಲ್ಬರ್ಗಾ	ಜಿಲಾ ಆಸ್ಪತ್ರೆ
16	ಕೊಪ್ಪಳ	ಜಿಲಾ ಆಸ್ಪತ್ರೆ
17	ಕೋಲಾರ	ಜಿಲಾ ಆಸ್ಪತ್ರೆ
18	ಧಾರವಾಡ	ಜಿಲಾ ಆಸ್ಪತ್ರೆ
19	ಬಾಗಲಕೋಟೆ	ಜಿಲಾ ಆಸ್ಪತ್ರೆ
20	ಕಾರವಾರ	ಜಿಲಾ ಆಸ್ಪತ್ರೆ

ಅನುಬಂಧ -3640

ಐ.ಸಿ.ಯು, ಘಟಕಗಳ ಬಗ್ಗೆ ಮಾಹಿತಿ.

ವೈದ್ಯಕೀಯ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಐ.ಸಿ.ಯು, ಘಟಕಗಳ ಆಸ್ಪತ್ರೆಗಳು

ಕ್ರ.ಸಂ	ಜಿಲ್ಲೆ ಹೆಸರು	ಆಸ್ಪತ್ರೆ ಹೆಸರು	ಹಾಸಿಗೆ ಸಂ,
1.	ಬೆಂಗಳೂರು (ನಗರ) ಜಿಲ್ಲೆ	ಜಯದೇವ ಹೃದ್ರೋಗ ಸಂಸ್ಥೆ	90 ಹಾಸಿಗೆ
2.	ಬೆಂಗಳೂರು (ನಗರ) ಜಿಲ್ಲೆ	ವಿಕ್ಟೋರಿಯಾ ಆಸ್ಪತ್ರೆ	32 ಹಾಸಿಗೆ
3	ಬೆಂಗಳೂರು (ನಗರ) ಜಿಲ್ಲೆ	ಬೌರಿಂಗ್ ಮತ್ತು ಲೇಡಿಕರ್ಜನ್ ಆಸ್ಪತ್ರೆ	10 ಹಾಸಿಗೆ
4	ಬೆಂಗಳೂರು (ನಗರ) ಜಿಲ್ಲೆ	ಎಸ್.ಜಿ.ಎಸ್- ರಾಜೀವ್ ಗಾಂಧಿ ಎದೆರೋಗಗಳ ಆಸ್ಪತ್ರೆ	24 ಹಾಸಿಗೆ
5	ಬೆಂಗಳೂರು (ನಗರ) ಜಿಲ್ಲೆ	ವಾಣಿವಿಲಾಸ ಆಸ್ಪತ್ರೆ, ಬೆಂಗಳೂರು	6 ಹಾಸಿಗೆ
6	ಮೈಸೂರು ಜಿಲ್ಲೆ	ಕೆ.ಆರ್.ಆಸ್ಪತ್ರೆ ಮೈಸೂರು	27 ಹಾಸಿಗೆ
7	ಮೈಸೂರು ಜಿಲ್ಲೆ	ಜಯಚಾಂಬ ಮಕ್ಕಳ ಆಸ್ಪತ್ರೆ, ಮೈಸೂರು	6 ಹಾಸಿಗೆ
8	ಧಾರವಾಡ ಜಿಲ್ಲೆ	ಕರ್ನಾಟಕ ವೈದ್ಯಕೀಯ ಸಂಸ್ಥೆ (ಕಿಮ್ಸ್) ಹುಬ್ಬಳ್ಳಿ	40 ಹಾಸಿಗೆ
9	ಬಳ್ಳಾರಿ	ವಿಜಯನಗರ ವೈದ್ಯಕೀಯ ಸಂಸ್ಥೆ (ವಿಮ್ಸ್) ಬಳ್ಳಾರಿ	30 ಹಾಸಿಗೆ
10	ಮಂಡ್ಯ	ಮಂಡ್ಯ ವೈದ್ಯಕೀಯ ಸಂಸ್ಥೆ (ಮಿಮ್ಸ್) ಮಂಡ್ಯ	30 ಹಾಸಿಗೆ
11	ಹಾಸನ	ಹಾಸನ ವೈದ್ಯಕೀಯ ಸಂಸ್ಥೆ (ಹಿಮ್ಸ್) ಹಾಸನ	15 ಹಾಸಿಗೆ
12	ಶಿವಮೊಗ್ಗ	ಮಣ್ಣಾಸ್ ಆಸ್ಪತ್ರೆ, ಶಿವಮೊಗ್ಗ ವೈದ್ಯಕೀಯ ಸಂಸ್ಥೆ ಶಿವಮೊಗ್ಗ	18 ಹಾಸಿಗೆ
13	ರಾಯಚೂರು	ರಾಯಚೂರು ವೈದ್ಯಕೀಯ ಸಂಸ್ಥೆ (ರಿಮ್ಸ್) ರಾಯಚೂರು	30 ಹಾಸಿಗೆ
14	ಬೀದರ್	ಬೀದರ್ ವೈದ್ಯಕೀಯ ಸಂಸ್ಥೆ (ಬಿಮ್ಸ್) ಬೀದರ್	20 ಹಾಸಿಗೆ
15.	ಬೆಳಗಾಂ	ಬೆಳಗಾವಿ ವೈದ್ಯಕೀಯ ಸಂಸ್ಥೆ , ಬೆಳಗಾಂ	30 ಹಾಸಿಗೆ